ದಿನಾಂಕಃ 29-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ–

8. ನೀರಿನ ಟ್ಯಾಂಕ್ ಇದೆ ಎಂದು ಹೇಳಿದ್ದೀರಿ ಅದು ಯಾವ ಜಾಗದಲ್ಲಿದೆ ಎಂದರೆ ಸಾಕ್ಷಿ ಸರ್ವೆ ನಂಬರು 110 ರಲ್ಲಿ ಇದೆ ಎನ್ನುತ್ತಾರೆ. 2 ನೇ ಆರೋಪಿ ಹಾರಮಕ್ಕಿ ಸರ್ವೆ ನಂಬರು 109/1 ಕ್ಕೆ ಸಂಬಂಧಿಸಿದಂತೆ ನಿಮ್ಮ, ಫ್ರಾಸಾ.3, 5 ಮತ್ತು ರಾಮಯ್ಯರವರ ವಿರುದ್ಧ ಮೂಡಿಗೆರೆ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.ನಂ.28/2021 ರಂತೆ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ.

9. ಹಾರಮಕ್ಕಿ ಗ್ರಾಮದಲ್ಲಿ ನಿವೇಶನಕ್ಕೆ ಕೊಟ್ಟ ಜಾಗದಲ್ಲಿ ಒಟ್ಟು 6 ಮನೆಗಳಿವೆ. ಎಲ್ಲಾ ಮನೆಗಳಿಗೂ ನೀರಿನ ನಲ್ಲಿ ವ್ಯವಸ್ಥೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನೀರನ್ನು ತರಲು ಟ್ಯಾಂಕಿನ ಹತ್ತಿರ ಹೋಗಬೇಕು ಎನ್ನುತ್ತಾರೆ.

10. ನಮ್ಮ ಊರು ಹಂತೂರು ಗ್ರಾಮ ಪಂಚಾಯ್ತಿಗೆ ಒಳಪಡುತ್ತದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಬೆಳಿಗ್ಗ 10.30 ಗಂಟೆಯಾಗಿತ್ತು. ಆಗ ಅಲ್ಲಿ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ ಮೊದಲಿಗೆ 1 ಮತ್ತು 2 ನೇ ಆರೋಪಿತರು ಕಾಣಿಸಿಕೊಂಡರು ಎನ್ನುತ್ತಾರೆ. ನಾನು ಸ್ಥಳದಲ್ಲಿ ಸುಮಾರು ಅರ್ಧ ಗಂಟೆಯವರೆಗೆ ಇದ್ದೆನು. ಅಲ್ಲಿಂದ ಎಲ್ಲಿಗೆ ಹೋದಿರಿ ಎಂದರೆ ಸಾಕ್ಷಿ ನನಗೂ ಹಲ್ಲೆ ಮಾಡಿದ್ದರಿಂದ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಹೋದೆನು ಎನ್ನುತ್ತಾರೆ. ಆಸ್ಪತ್ರೆಗೆ ಯಾರೆಲ್ಲಾ ಹೋದಿರಿ ಎಂದರೆ ಸಾಕ್ಷಿ ನನಗೆ ಪ್ರಜ್ಞೆ ಇರಲಿಲ್ಲ ಎನ್ನುತ್ತಾರೆ. ನನ್ನ ಭುಜಕ್ಕೆ ಪೆಟ್ಟು ಬಿದ್ದು ರಕ್ತ ಬಂದಿದ್ದರಿಂದ ಪ್ರಜ್ಞೆ ಹೋಗಿತ್ತು, ಆದರೆ ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ನನಗೆ ಆದ ಗಾಯದಿಂದ ಬಂದ ರಕ್ತ ರಸ್ತೆಯ ಮೇಲೆಲ್ಲಾ ಬಿದ್ದಿತ್ತು ಮತ್ತು ನನ್ನ

ಬಟ್ಟೆಗಳಿಗೆ ಅಂಟಿತ್ತು.

11. ನಾನು ಒಂದು ದಿನ ಮೂಡಿಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಂತರ ಅಲ್ಲಿಂದ ಹಾಸನದ ಜಿಲ್ಲಾ ಆಸ್ಪತ್ರೆಗೆ ಹೋದೆನು. ಮೂಡಿಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಿನವೇ ನೀವು ಹಾಸನದ ಆಸ್ಪತ್ರೆಗೆ ಹೋಗಿದ್ದೀರಾ ಅಥವಾ ಮಾರನೆ ದಿನ ಹೋಗಿದ್ದೀರಾ ಎಂದರೆ ಸಾಕ್ಷಿ ಚಿಕಿತ್ಸೆ ಪಡೆದ ದಿನವೇ ಹೋದೆನು ಎನ್ನುತ್ತಾರೆ. ಹಾಸನದ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲಾಗಿರಲಿಲ್ಲ, ಕೇವಲ ಚಿಕಿತ್ಸೆ ಪಡೆದುಕೊಂಡಿದ್ದೆನು.

12. ಆರೋಪಿತರು ಮುಳ್ಳಿನ ದಡಿಯಿಂದ ನಿಮಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದೀರಿ ಅದು ಯಾವ ದಡಿ ಎಂದರೆ ಸಾಕ್ಷಿ ಕಿತ್ತಲೆ ಮರದ ದಡಿ ಎನ್ನುತ್ತಾರೆ. ಮು.ಮಾ.2 ಎಂದು ಗುರುತಿಸಲ್ಪಟ್ಟಿರುವ ದೊಣ್ಣೆಯನ್ನು ತೋರಿಸಿ ನೀವು ಹೇಳಿದ ಮರದ ದಡಿ ಇದೆಯೇ ಎಂದು ಕೇಳಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ಮರದ ದಡಿ ಅಲ್ಲ ಬೇಲಿಯ ಗೂಟ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಆ ರೀತಿಯ ದೊಣ್ಣೆಯನ್ನು ಬೇಲಿಯ ಗೂಟವನ್ನಾಗಿ ನೆಡಲಾಗುತ್ತದೆ ಎಂದರೆ ಸರಿ. ಮು.ಮಾ.3 ಎಂದು ಗುರುತಿಸಲ್ಪಟ್ಟಿರುವ ದಬ್ಬೆ ಅಡಿಕೆಯ ದಬ್ಬೆ. ಅದು ಅಡಿಕೆಯ ದಬ್ಬೆ ಅಲ್ಲ ಬಿದಿರಿನ ದಬ್ಬೆ ಎಂದರೆ ಸರಿಯಲ್ಲ. ಅದನ್ನು ಸಾಮಾನ್ಯವಾಗಿ ಬೇಲಿಯನ್ನು ಹಾಕಲು ಬಳಲಾಗುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಕಲ್ಲು ಯಾವ ರೀತಿಯದು ಎಂದರೆ ಕಾಡು ಕಲ್ಲು ಎನ್ನುತ್ತಾರೆ. ನೀವು ಹೇಳಿದಂತೆ ಅದು ಕಾಡು ಕಲ್ಲು ಅಲ್ಲ ರಸ್ತೆಗೆ ಡಾಂಬರಿಗೆ ಹಾಕುವ ಜಲ್ಲಿ ಕಲ್ಲು ಎಂದರೆ ಸಾಕ್ಷಿ ಅದು ಕಾಡುಕಲ್ಲು ಆ ರೀತಿಯ ಕಲ್ಲುಗಳು ಕಾಡಿನಲ್ಲಿ ಸಿಗುತ್ತವೆ ಎನ್ನುತ್ತಾರೆ.ನೀವು ಗುರುತಿಸಿರುವ ಮುದ್ದೆಮಾಲುಗಳಿಗೂ ಆರೋಪಿತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವುಗಳನ್ನು ನೀವು ಮತ್ತು ಇತರೆ ಸಾಕ್ಷಿದಾರರು ಸೇರಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರು ಪಡಿಸಿದ್ದೀರಿ ಎಂದರೆ

ಸರಿಯಲ್ಲ. ಆರೋಪಿತರ ಸ್ವಾಧೀನದಲ್ಲಿರುವ ಹಿಡುವಳಿ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿನಿಂದ ನೀವು, ಫ್ರಾಸಾ.1, 4 ಮತ್ತು 5 ರವರು ಆರೋಪಿತರ ವಿರುದ್ಧ ಸುಳ್ಳು ಆರೋಪವನ್ನು ಹೊರಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ